ಆ) ಸರ್ಕಾರದ ಆದೇಶದ ಸಂಖ್ಯೆ: ಸಕಾ 66 ಬಿಸಿಎ 86 ದಿನಾಂಕ : 13-10-86ರ ಪ್ರಕಾರ ಭಾರತೀಯ ಸಂವಿಧಾನ 15(4) ಮತ್ತು 16(4)ನೇ ವಿಧಿಗಳ ಪ್ರಕಾರ ಶೈಕ್ಷಣಿಕ ಮತ್ತು ಔದ್ಯೋಗಿಕ ಮೀಸಲಾತಿಯನ್ನು 'ಇ' ಗುಂಪಿನಡಿಯಲ್ಲಿ ವಾರ್ಷಿಕವಾಗಿ ಆದಾಯ ರೂ. 8000.00ಕ್ಕಿಂತ ಕಡಿಮೆ ಇದ್ದಲ್ಲಿ ಪಡೆಯಬಹುದಾಗಿದೆ. ಇದರ ಜೊತೆಗೆ ಸ್ವಾವಲಂಬನ ಯೋಜನೆಯಡಿಯಲ್ಲಿ ಸಾಲದ ಸೌಲಭ್ಯ ಪ್ರೋರ್ಮನ್‌ಶಿಪ್ ತರಬೇತಿ ಮತ್ತು ವಾಹನ ಚಾಲನ ತರಬೇತಿ ಸೌಲಭ್ಯಗಳನ್ನು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಮತೀಯ ಅಲ್ಪಸಂಖ್ಯಾತರು ಪಡೆದುಕೊಳ್ಳಬಹುದಾಗಿದೆ.

ಇ) ಸರ್ಕಾರದ ವಿವಿಧ ಇಲಾಖೆಗಳಲ್ಲಿ ಹಾಗೂ ಸರ್ಕಾರಿ ಸ್ವಾಮ್ಯದ ಸಾರ್ವಜನಿಕ ಉದ್ಯಮಗಳಲ್ಲಿ ಒಟ್ಟು 33 ಜನ ಆಂಗ್ಲೋ ಇಂಡಿಯನ್ನರು ಸೇವೆ ಸಲ್ಲಿಸುತ್ತಿದ್ದಾರೆ.

ಆಂಗ್ಲೋ ಇಂಡಿಯನ್ ಜನಾಂಗದ ಏಳಿಗೆ.

3748 - ಶ್ರೀ ಡೆರಿಕ್ ಎಂ.ಬಿ. ಫುಲಿನ್ ಫಾ (ನಾಮನಿರ್ದೇಶನ ಹೊಂದಿದವರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆಂಗ್ಲೋ ಇಂಡಿಯನ್ ಸಮುದಾಯದಲ್ಲಿ ಶೇಕಡಾ 90 ಕ್ಕಿಂತ ಹೆಚ್ಚಿನವರು ಬಡತನ ರೇಖೆಗಿಂದ ಕೆಳಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಶೇಕಡಾ 40 ರಿಂದ 50ರಷ್ಟು ಈ ಸಮುದಾಯದ ಜನರ ಸ್ಥಿತಿ ತುಂಬಾ ಕೆಳಮಟ್ಟದಲ್ಲಿರುವುದು ಮತ್ತು ಇವರಿಗೆ ತಕ್ಷಣದ ಪುನರ್ವಸತಿ ಕಾರ್ಯಕ್ರಮದ ಅವಶ್ಯಕತೆ ಇದೆ ಎಂಬುದು ನಿಜವೇ?*

ಇ) *ಹಾಗಿದ್ದಲ್ಲಿ ಸರ್ಕಾರವು ಈ ಜನಾಂಗದವರಿಗೆ ತುರ್ತು ಪರಿಹಾರ ಮತ್ತು ಪುನರ್ವಸತಿ ಕಲ್ಪಿಸಿ, ಮೇಲಕ್ಕೆತ್ತಲು ಕ್ರಮ ಕೈಗೊಳ್ಳುವುದೇ?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)ಛ

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಆಂಗ್ಲೋ ಇಂಡಿಯನ್ ಸಮುದಾಯದ ಜನರನ್ನು ಧಾರ್ಮಿಕ ಅಲ್ಪಸಂಖ್ಯಾತರೆಂದು ಪರಿಗಣಿಸಲಾಗಿದೆ ಮತ್ತು ಕುಟುಂಬದ ವಾರ್ಷಿಕ ಆದಾಯ ರೂ.6000-00ಕ್ಕಿಂತ ಮೀರದಿದ್ದಲ್ಲಿ ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ (ನಿ) ಇದರ ಮೂಲಕ ಸೌಲಭ್ಯಗಳನ್ನು ಪಡೆಯಬಹುದು.

ಆಂಗ್ಲೋ ಇಂಡಿಯನ್ ಪಂಗಡದವರಿಗೆ ದೊರೆಯುವ ಸೌಲಭ್ಯಗಳು.

3746 - ಶ್ರೀ ಡೆರಿಕ್ ಎಂ. ಬಿ. ಫುಲಿನ್ ಫಾ (ನಾಮನಿರ್ದೇಶನ ಹೊಂದಿದವರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಂಗ್ಲೋ ಇಂಡಿಯನ್ ಪಂಗಡದವರಿಗೆ ಯಾವುದಾದರೂ ಯೋಜನೆಯಲ್ಲಿ ಸೌಲಭ್ಯ ದೊರೆಯುವುದೇ?*

ಆ) *ಹಾಗಿದ್ದಲ್ಲಿ, ಕಳೆದ ಮೂರು ವರ್ಷಗಳಲ್ಲಿ ಸದರಿ ಯೋಜನೆಗಳಡಿಯಲ್ಲಿ ಸೌಲಭ್ಯ ಹೊಂದಿದ ಆಂಗ್ಲೋ ಇಂಡಿಯನ್ನರ ಸಂಖ್ಯೆ*

ಇ) ಈ ಯೋಜನೆಯ ಉಪಯೋಗ ಹೊಂದಲು ಸಾಕಷ್ಟು ಅಲ್ಪಸಂಖ್ಯಾತರ ಪಂಗಡದವರುಗಳು ಮುಂದೆ ಬರದಿರುವುದು ನಿಜವೇ, ಹಾಗಿದ್ದಲ್ಲಿ ಇದಕ್ಕೆ ಕಾರಣಕೊಡಿ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು):

ಅ) ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಆಂಗ್ಲೋ ಇಂಡಿಯನ್ ಪಂಗಡದವರು ಈ ಕೆಳಕಂಡ ಯೋಜನೆಗಳಲ್ಲಿ ಸೌಲಭ್ಯಗಳನ್ನು ಪಡೆಯಬಹುದು.

1. ಸ್ವಾವಲಂಬನ ಯೋಜನೆ
2. ವಾಹನ ಚಾಲನಾ ತರಬೇತಿ ಯೋಜನೆ
3. ಫೋರ್‌ಮನ್‌ಶಿಪ್ ತರಬೇತಿ ಯೋಜನೆ
4. ಕಂಪ್ಯೂಟರ್ ಟ್ರೈನಿಂಗ್ ಯೋಜನೆ.

ಆ) ಆಂಗ್ಲೋ ಇಂಡಿಯನ್‌ರನ್ನು ಒಳಗೊಂಡಂತೆ ಸೌಲಭ್ಯಗಳನ್ನು ಪಡೆದುಕೊಂಡಿರುವ ಕ್ರಿಶ್ಚಿಯನ್ ಜನಾಂಗದವರ ವಿವರಗಳು ಕೆಳಕಂಡಂತಿವೆ:

ಸ್ವಾವಲಂಬನ ಯೋಜನೆ	-	360
ವಾಹನ ಚಾಲನಾ ತರಬೇತಿ ಯೋಜನೆ	-	339
ಫೋರ್‌ಮನ್‌ಶಿಪ್ ತರಬೇತಿ	-	007
ಕಂಪ್ಯೂಟರ್ ಟ್ರೈನಿಂಗ್	-	003

ಇ) ನಿಜವಲ್ಲ - ನಿಗಮದ ಎಲ್ಲಾ ಯೋಜನೆಗಳಿಗೂ ಹೆಚ್ಚಿನ ಬೇಡಿಕೆ ಇದ್ದು ಅಲ್ಪಸಂಖ್ಯಾತರ ಪಂಗಡದವರು ಎಲ್ಲಾ ಯೋಜನೆಗಳನ್ನು ಅತ್ಯುತ್ತಮವಾಗಿ ಉಪಯೋಗಿಸಿಕೊಂಡಿರುತ್ತಾರೆ.

ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪರಿಷ್ಕರಿಸುವುದು

3729 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅನೇಕ ವರ್ಷಗಳಿಂದ ಟೋಬಾಕೋ ಮತ್ತು ಬೀಡಿ ಉದ್ದಿಮೆಯ ಕಾರ್ಮಿಕರಿಗೆ ಕನಿಷ್ಠ ವೇತನವನ್ನು ಪರಿಷ್ಕರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಯಾವಾಗ ಪರಿಷ್ಕರಿಸಲಾಗುವುದು ?

ಇ) ಕನಿಷ್ಠ ವೇತನದ ಬಗ್ಗೆ ಕಾರ್ಮಿಕ ಆಯುಕ್ತರು ಮುಂದೆ ಒಂದು ಒಪ್ಪಂದವಾಗಿದ್ದರೂ ಆದನ್ನು ಅನುಷ್ಠಾನಗೊಳಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ) ಹೌದು

ಆ) ಈ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಇ) ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಯಲ್ಲಿನ ಬೀಡಿ ಕಾರ್ಮಿಕರಿಂದ ದೂರುಗಳನ್ನು ಸ್ವೀಕರಿಸಲಾಗಿದೆ. ಒಪ್ಪಂದಗಳನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.